<u>ಓ.ಎಸ್. – 150/2021</u>

<u>ಡಿ.ಡಬ್ಲೂ – 1</u>

<u>ಸಾಕ್ಷಿಯನ್ನು ದಿಃ 06.11.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ವಿ. ವಕೀಲರಿಂದ</u>

1. ವಾದಿಯ ತಂದೆ ತಾಯಿ ಹಾಗೂ ಅಕ್ಕ ಸ್ವತ್ತನ್ನು ನಮಗೆ ಮೋಸ ಮಾಡಿ ಮಾರಾಟ ಮಾಡಿದ್ದಾರೆಂದು ಸ್ವತ್ತನ್ನು ಖರೀದಿಸಿದ 1 ವರ್ಷದ ನಂತರ ನನಗೆ ತಿಳಿದು ಬಂತು. ನಾವು ಖರೀದಿಸಿದ ಸ್ವತ್ತು ಕೆರಿಯಪ್ಪ ರವರ ಸ್ವಾಧೀನದಲ್ಲಿರುವುದರಿಂದ ಅದನ್ನು ನಮ್ಮ ಸ್ವಾಧೀನಕ್ಕೆ ಪಡೆಯಲು ನಾವು ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ. ನಾನು ಖರೀದಿಸಿದ ಸ್ವತ್ತು ನನ್ನ ಸ್ವಾಧೀನದಲ್ಲಿಯೇ ಇದ್ದರೂ ಇರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿ ನನ್ನ ವಿರುದ್ಧ ಪ್ರತಿವಾದಿಯರೊಂದಿಗೆ ಶಾಮೀಲಾಗಿ ಸುಳ್ಳು ದಾವೆ ಸಲ್ಲಿಸಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಗೆ ಪಿತ್ರಾರ್ಜಿತ ಆಸ್ತಿಯಾಗಿರುವುದರಿಂದ ವಾದಿಗೆ ದಾವಾ ಸ್ವತ್ತಿನಲ್ಲಿ ಸಮಾನ ಪಾಲಿದೆ ಎಂದರೆ ಸರಿಯಲ್ಲ.

2. ವಾದಿಯ ತಂದೆ ತಾಯಿ ಹಾಗೂ ಅಕ್ಕ ಮಾರಾಟ ಮಾಡಿ ಸ್ವಾಧೀನ ನೀಡಿದ ಜಮೀನು ಸರ್ಕಾರಿ ಜಮೀನು ಎಂದು ಖರೀದಿಸಿದ ಒಂದು ವರ್ಷದ ನಂತರ ತಿಳಿಯಿತು. ನಾನು ಈಗ ಸರ್ಕಾರಿ ಜಾಗದಲ್ಲೇ ವಾಸವಿರುತ್ತೇನೆ. ಸದರಿ ಸರ್ಕಾರಿ ಜಮೀನಿನಲ್ಲಿ ಜೋಳವನ್ನು ಬೆಳೆದಿರುತ್ತೇನೆ, ಅದರಲ್ಲಿರುವ ಗಿಡ ಮರಗಳನ್ನು ಕಡಿಸಿರುತ್ತೇನೆ. ಸರ್ಕಾರಿ ಜಾಗದಲ್ಲಿ ಗಿಡ ಮರಗಳನ್ನು ಕಡಿದಿರುವುದನ್ನು ನೋಡಿ ಅರಣ್ಯ ಇಲಾಖೆಯವರು ಬಂದಿದ್ದರು, ಅವರಿಗೆ ನಾನು ದಂಡವನ್ನು ಸಹ ಕಟ್ಟಿದ್ದೇನೆ ಹಾಗೂ ಕಟ್ಟಿಗೆಗಳನ್ನು ಅವರಿಗೆ ನೀಡಿದ್ದೇನೆ. ಕಟ್ಟಿಗೆಯನ್ನು ಅರಣ್ಯ ಇಲಾಖೆಯವರಿಗೆ ನೀಡಿರುವುದಕ್ಕೆ ಸಂಬಂಧಿಸಿದಂತೆ ದಂಡ ಹಾಕಿರುವ ರಶೀದಿ ಇರುತ್ತದೆ. ಸದರಿ ರಶೀದಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತೇನೆ.

3. 1 ಮತ್ತು 2 ನೇ ಪ್ರತಿವಾದಿಯರ ಬಳಿ ನಾನು ಖರೀದಿಸಿದ ಸ್ವತ್ತು ಇದಲ್ಲ ಎಂದು ನಾನು ಖರೀದಿಸಿದ ಸ್ವತ್ತನೇ ನನಗೆ ನೀಡಿ ಎಂದು ಕೇಳಿರುವುದಿಲ್ಲ. ಅಷ್ಟರಲ್ಲಿ ಈಶ್ವರಪ್ಪ ಮೃತಪಟ್ಟಿದ್ದರು, ಆ ಕಾರಣದಿಂದ ಕೇಳಲಿಲ್ಲ.

ದಾವಾ ಸ್ವತ್ತನ್ನು ಹಾಗೂ ಅದರೊಂದಿಗೆ ಅರಣ್ಯದ ಸ್ವತ್ತನ್ನು ಸಹ ಸಾಗುವಳಿ ಮಾಡುತ್ತಿದ್ದರೂ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ